ಸಲಹೆ-ಸೂಚನೆ ರಾಸಾಯನಿಕ ಗೊಬ್ಬರದಿಂದ ಮಣ್ಣು ಹಾಳು: ಧರ್ಮಾಧಿಕಾರಿ | ವಿವಿಗಳ ನೂತನ ಕುಲಪತಿಗಳಿಗೆ ಅಭಿನಂದನೆ

ಕೃಷಿ ಯೋಜನೆಗಳ ಬಗ್ಗೆ ರೈತರಿಗೆ ತಿಳಿಸಿ: ಡಾ ಹೆಗ್ಗಡೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸರ್ಕಾರದ ಕೃಷಿ ಯೋಜನೆಗಳ ಬಗ್ಗೆ ಶೇ.90 ರಷ್ಟು ರೈತರಿಗೆ ಮಾಹಿತಿ ಕೊರತೆ ಇರುವುದರಿಂದ ವಿಶ್ವವಿದ್ಯಾಲಯಗಳಿಂದ ಈ ಕುರಿತು ರೈತರಿಗೆ ಸೂಕ್ತ ಮಾರ್ಗದರ್ಶನ ದೊರೆಯುವಂತಾಗ ಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ.ವೀರೇಂದ್ರ ಹೆಗ್ಗಡೆ ಸಲಹೆ ನೀಡಿದರು.

ಬುಧವಾರ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಲುಮ್ನಿ ಅಸೋಸಿಯೇಷನ್ ಹಮ್ಮಿಕೊಂಡಿದ್ದ ಕರ್ನಾಟಕ ಕೃಷಿ ಸಂಬಂಧಿತ ವಿವಿಗಳ ನೂತನ ಕುಲಪತಿಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಚಟುವಟಿಕೆಗಳಿಗೆ ಆದಾಯಕ್ಕಿಂತ ಹೆಚ್ಚು ವೆಚ್ಚವಾಗುತ್ತಿದೆ. ಆದಾಯ ಹೆಚ್ಚಿಸಿಕೊಳ್ಳಲು ರೈತರು ಸರ್ಕಾರ ರೂಪಿಸಿರುವ ಕೃಷಿ ಯೋಜನೆಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕೃಷಿ ಭೂಮಿಯಲ್ಲಿ ಅತಿಯಾಗಿ ರಾಸಾಯನಿಕ ಗೊಬ್ಬರಗಳನ್ನು ಬಳಕೆ ಮಾಡುತ್ತಿರುವುದರಿಂದ ಮಣ್ಣು ಸತ್ವ ಕಳೆದುಕೊಳ್ಳುತ್ತಿದೆ. ಈ ಸಮಸ್ಯೆಯಿಂದ ಹೊರ ಬರಲು ಇದೀಗ ಸಾವಯವ ಕೃಷಿಗೆ ಹೆಚ್ಚಿನ ಒತ್ತು ಕೊಡಲಾಗುತ್ತಿದೆ. ಭೂಮಿಯು ಮತ್ತೆ ಸಾವಯವ ಕೃಷಿಗೆ ಹೊಂದಿಕೊಳ್ಳಲು ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಕೆರೆಗಳ ನಾಶದಿಂದ ನೀರಿನ ಕೊರತೆ ಎದುರಾಗುತ್ತಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತಿಯಿಂದ 500 ಕೆರೆ ಅಭಿವೃದ್ಧಿಪಡಿಸಲಾಗಿದ್ದು ನೀರಿನ ಸದ್ಬಳಕೆಯ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು ಎಂದರು.

ಗ್ರಾಮೀಣ ಭಾಗಗಳಲ್ಲಿ ಕೃಷಿ ಕೆಲಸಕ್ಕೆ ಜನ ಸಿಗುತ್ತಿಲ್ಲ. ಇದರಿಂದ ಕೃಷಿಕರು ಕೆಲಸ ಅರಸಿ ಪಟ್ಟಣಕ್ಕೆ ಹೋಗುತ್ತಿದ್ದಾರೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಮತೋಲನದ ಕೊರತೆ ಇರುವುದರಿಂದ ಕೃಷಿಗೆ ಹೆಚ್ಚಿನ ಆದ್ಯತೆ ಕೊಡಲು ಆಗುತ್ತಿಲ್ಲ. ಕೃಷಿ ಲಾಭದಾಯಕ ಎಂಬ ಪರಿಸ್ಥಿತಿ ಸದ್ಯ ಇಲ್ಲ. ಕೋವಿಡ್ ಬಂದ ಸಂದರ್ಭದಲ್ಲಿ ಹಳ್ಳಿಗೆ ಬಂದವರು ಇದೀಗ ಮತ್ತೆ ನಗರಗಳತ್ತ ಮುಖ ಮಾಡುತ್ತಿದ್ದಾರೆ. ಕೃಷಿ ಲಾಭದಾಯವಾಗಿ ಮಾಡುವಂತ ಯೋಜನೆಗಳು ಜಾರಿಗೊಳ್ಳಬೇಕು ಎಂದು ಹೇಳಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಲುಮ್ನಿ ಅಸೋಸಿಯೇಷನ್ ಹಮ್ಮಿಕೊಂಡಿದ್ದ ಕರ್ನಾಟಕ ಕೃಷಿ ಸಂಬಂಧಿತ ವಿವಿಗಳ ನೂತನ ಕುಲಪತಿಗಳಿಗೆ ಅಭಿನಂದನಾ ಸಮಾರಂಭವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು.

ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಅನಿವಾರ್ಯ ಎನ್ನುವಂತಾಗಿದೆ. ಹೀಗಾಗಿ 120 ಕೃಷಿ ಯಂತ್ರದಾರಿಗಳನ್ನು ನಮ್ಮ ಯೋಜನೆಗಳಲ್ಲಿ ತರುತ್ತೇವೆ. ಸರ್ಕಾರ ಇದಕ್ಕೆ ಶೇ.80ರಷ್ಟು ಅನುದಾನ ಕೊಟ್ಟಿದೆ. ಗ್ರಾಮೀಣ ಭಾಗದಲ್ಲಿ ಅವಲಂಬನೆ ಕೃಷಿ ಮಾಡುವಂತಾಗಬೇಕು. ಸಣ್ಣ-ಪುಟ್ಟ ಯಂತ್ರ ಬಳಸಿ ಇದ್ದ ಭೂಮಿಯಲ್ಲೇ ಹೆಚ್ಚು ಕೃಷಿ ಮಾಡಲು ಅನುವು ಮಾಡಿಕೊಡಬೇಕಾಗಿದೆ.

• **ವೀರೇಂದ್ರ ಹೆಗ್ಗಡೆ** ಧರ್ಮಸ್ಥಳ ಧರ್ಮಾಧಿಕಾರಿ

ಕಾರ್ಯಕ್ರಮದಲ್ಲಿ ಕುಲಪತಿಗಳಾದ ಡಾ. ಕೆ.ಸಿ. ವೀರಣ್ಣ, ಡಾ.ಆರ್.ಸಿ.ಜಗದೀಶ್, ಡಾ. ಪಿ.ಎಲ್.ಪಾಟೀಲ್, ಡಾ.ಎಂ.ಹನುಮಂತಪ್ಪ, ಡಾ.ಎಸ್.ವಿ.ಸುರೇಶ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

23-02-2023
Kannadaprbha Pg 04

ದ್ರಾಕ್ಷಿ, ಕಲ್ಲಂಗಡಿ ಮೇಳಕ್ಕೆ ಚಾಲನೆ

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಮಾರಾಟ | ಶೇ.10 ರಿಯಾಯಿತಿ ದರದಲ್ಲಿ ಲಭ್ಯ



ವಿಜಯವಾಣಿ

ನಗರದಲ್ಲಿ ಹಾಪ್‌ಕಾಮ್ಸ್ ಆಯೋಜಿಸಿರುವ ದ್ರಾಕ್ಷಿ ಮತ್ತು ಕಲ್ಲಂಗಡಿ ಮೇಳಕ್ಕೆ ತೋಟಗಾರಿಕೆ ಸಚಿವ ಮುನಿರತ್ನ ಬುಧವಾರ ಚಾಲನೆ ನೀಡಿದರು. ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೇಸಿಗೆ ಆರಂಭದೊಂದಿಗೆ ಬಹುಬೇಡಿಕೆಯ ಹಾಗೂ ತಂಪು ನೀಡುವ ದ್ರಾಕ್ಷಿ ಮತ್ತು ಕಲ್ಲಂಗಡಿ ಮೇಳಕ್ಕೆ ಚಾಲನೆ ದೊರೆತಿದ್ದು, ನಗರದ 211 ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ನಡೆಯಲಿದೆ.

ಲಾಲ್‌ಬಾಗ್ ಬಳಿಯ ಹಾಪ್‌ಕಾಮ್ಸ್ ಪ್ರಧಾನ ಮಳಿಗೆಯಲ್ಲಿ ತೋಟಗಾರಿಕೆ ಸಚಿವ ಮುನಿರತ್ನ ಹಾಗೂ ಶಾಸಕ ಉದಯ್ ಗರುಡಾಚಾರ್ ಬುಧವಾರ ಮೇಳವನ್ನು ಉದ್ಘಾಟಿಸಿದರು. ಮೇಳದಲ್ಲಿ ವಿಶೇಷವಾಗಿ ಕಿರಣ್ ಕಲ್ಲಂಗಡಿ, ನಾಮಧಾರಿ ಮತ್ತು ಹಳದಿ ಕಲ್ಲಂಗಡಿ, ಬೀಜರಹಿತ ಕಲ್ಲಂಗಡಿ ಸಿಗಲಿದೆ. ವಿಜಯಪುರ, ಬಾಗಲಕೋಟೆ, ಕೊಪ್ಪಳ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ ಬೆಳೆದ ಬೆಂಗಳೂರು ನೀಲಿ, ಶರದ್ ಸೀಡ್‌ಲೆಸ್, ಕೃಷ್ಣ ಶರದ್, ಥಾಮ್ಸನ್ ಸೀಡ್‌ಲೆಸ್, ಸೋನಾಕ, ತಾಜ್ ಗಣೇಶ್, ಸೂಪರ್ ಸೋನಾಕ, ಜಂಬೂ ಶರದ್, ಆಸ್ಟ್ರೇಲಿಯಾ ರೆಡ್ ಗ್ಲೋಬ್ ದ್ರಾಕ್ಷಿಹಣ್ಣುಗಳು ಶೇ.10ರ ರಿಯಾಯಿತಿಯಲ್ಲಿ ಗ್ರಾಹಕರಿಗೆ ಲಭ್ಯವಿದೆ.

ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಹಣ್ಣುಗಳ ಪೂರೈಕೆಯಾಗುತ್ತಿದ್ದು, ಮೊದಲ ದಿನದಂದು 8 ಟನ್ ದ್ರಾಕ್ಷಿ ಹಾಗೂ 20 ಟನ್ ಕಲ್ಲಂಗಡಿ ಆಗಮಿಸಿವೆ. ಈ ಹಣ್ಣುಗಳ ಸೀಸನ್ ಮುಗಿಯುವವರೆಗೂ ಮೇಳ ನಡೆಯಲಿದೆ. 400ರಿಂದ 500 ಮೆಟ್ರಿಕ್ ಟನ್ ದ್ರಾಕ್ಷಿ ಹಾಗೂ 800ರಿಂದ 1000 ಮೆಟ್ರಿಕ್ ಟನ್ ಕಲ್ಲಂಗಡಿ ಹಣ್ಣಿನ ವಹಿವಾಟು ನಡೆಸುವ ಗುರಿ ಇದೆ ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್ ತಿಳಿಸಿದರು.

ಕೆಎಚ್‌ಎಫ್ ವ್ಯವಸ್ಥಾಪಕ ನಿರ್ದೇಶಕಿ ಎಚ್. ಎನ್. ಹೇಮ, ಹಾಪ್ ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ ಶಂಕರ್ ಮಿರ್ಜಿ ಇತರರಿದ್ದರು.

ಪ್ರತಿ ಕೆ.ಜಿ.ಗೆ ದರ	
ಬೆಂಗಳೂರು ನೀಲಿ ದ್ರಾಕ್ಷಿ	49 ರೂ.
ದ್ರಾಕ್ಷಿ ಟಿ.ಎಸ್.	67 ರೂ.
ದ್ರಾಕ್ಷಿ ಟಿ.ಜಿ.	72 ರೂ.
ಸೋನಾಕ್	72 ರೂ.
ಸೂಪರ್ ಸೋನಾಕ್	76 ರೂ.
ಶರದ್	130 ರೂ.
ಕೃಷ್ಣ ಶರದ್	149 ರೂ.
ಇಂಡಿಯನ್ ರೆಡ್ ಗ್ಲೋಬ್	144 ರೂ.
ಕೃಷ್ಣ ಶರದ್ ಸೂಪರ್	164 ರೂ.
ಜಂಬೂ ಶರದ್	176 ರೂ.
ಆಸ್ಟ್ರೇಲಿಯಾ ರೆಡ್ ಗ್ಲೋಬ್	423 ರೂ.
ಕಿರಣ ಕಲ್ಲಂಗಡಿ	19ರೂ.
ನಾಮಧಾರಿ ಕಲ್ಲಂಗಡಿ	19ರೂ.
ಹಳದಿ ಕಲ್ಲಂಗಡಿ	36ರೂ.

ಹಾಪ್‌ಕಾಮ್ಸ್ ನೇರವಾಗಿ ರೈತರಿಂದ ಹಣ್ಣುಗಳನ್ನು ಖರೀದಿಸಿ, ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ಇದರಿಂದ ಉತ್ತಮ ಗುಣಮಟ್ಟದ ಸರಕು ಜನತೆಗೆ ಸಿಗುತ್ತದೆ. ಜತೆಗೆ ರೈತರಿಗೆ ಲಾಭವೂ ಆಗುತ್ತದೆ. ಗ್ರಾಹಕರು ಹೆಚ್ಚೆಚ್ಚು ಖರೀದಿಸುವ ಮೂಲಕ ರೈತರಿಗೆ ನೆರವಾಗಬೇಕು.

| ಮುನಿರತ್ನ
ತೋಟಗಾರಿಕೆ ಸಚಿವ

23-02-2023
Viajayavani Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹೆಸರಘಟ್ಟದ ಐಐಎಚ್‌ಆರ್‌ನಲ್ಲಿ ರಾಷ್ಟ್ರೀಯ ಮೇಳ | 250ಕ್ಕೂ ಹೆಚ್ಚು ಮಳಿಗೆಗಳಲ್ಲಿ ಭರಪೂರ ಮಾಹಿತಿ

ವೈವಿಧ್ಯಮಯ ತೋಟಗಾರಿಕೆ ಉತ್ಪನ್ನಗಳ ಆಕರ್ಷಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಾಯಲ್ಲಿ ನೀರೂರಿಸುವ ತರೇಹವಾರಿ ಕಲ್ಲಂಗಡಿ ಹಣ್ಣು, ಕ್ರಿಕೆಟ್ ಬಾಲ್ ಆಕಾರದಲ್ಲಿ ಬೆಳೆದಿರುವ ಕೊಯಮತ್ತೂರಿನ ಸಪೋಟ, ವರ್ಷವಿಡೀ ಸಂಗ್ರಹಿಸಬಹುದಾದ ಡ್ರ್ಯಾಗನ್ ಫ್ರೂಟ್ ಪುಡಿ, ಲಂಬ ಕೃಷಿ ಪದ್ಧತಿಯಡಿ 6 ಪಟ್ಟು ಇಳುವರಿ ನೀಡುವ ಹಸಿರುಮನೆಯಲ್ಲಿ ಬೆಳೆಯಬಹುದಾದ ತರಕಾರಿಗಳು, ಸಿರಿಧಾನ್ಯಗಳ ಬಗ್ಗೆ ಮಾಹಿತಿ ನೀಡುವ 'ಮಿಲೆಟ್ ಪಾರ್ಕ್', 80 ಅಡಿ ಎತ್ತರದ ಅಡಕೆಗೊನೆ ಕತ್ತರಿಸುವ ಫೈಬರ್ ದೋಟಿ ಇತ್ಯಾದಿ ಯಂತ್ರೋಪಕರಣಗಳು ತೋಟಗಾರಿಕೆ ಬೆಳೆಗಾರರನ್ನು ಆಕರ್ಷಿಸುತ್ತಿವೆ.

ಚಿಪ್ಸ್ ತಯಾರಿಕೆಗೆಂದೇ ಅಭಿವೃದ್ಧಿಪಡಿಸಿರುವ ಫ್ರಾನ್ಸ್ ಮೂಲದ ಬಾಳೆಹಣ್ಣು ಹೋಲುವ 'ಪೊಪೇಲೋ' ವೀಕ್ಷಕರ ಗಮನ ಸೆಳೆದಿದೆ. ಬೆಳಗಾವಿಯ ಅರಭಾವಿ ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಿರುವ ಈ ಹಣ್ಣನ್ನು ಸದ್ಯದಲ್ಲೇ ರೈತರ ತೋಟಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಈ ಸಂಸ್ಥೆ ಇದುವರೆಗೆ 100 ಬಾಳೆ ತಳಿಗಳು ಹಾಗೂ 60 ಸಪೋಟ ತಳಿಗಳನ್ನು ಸಂಶೋಧನೆ ಮಾಡಿದೆ. ಇದೇ ರೀತಿ ಹಲವು ಹಣ್ಣು-ತರಕಾರಿಗಳ ಹೊಸ ತಳಿ, ಹೆಚ್ಚು ಇಳುವರಿ ನೀಡುವ ಹಾಗೂ ಕಡಿಮೆ ಅವಧಿಯಲ್ಲಿ ರೈತರ ಕೈಸೇರುವ ಬೆಳೆಗಳ ಬಗ್ಗೆ ಅನ್ನದಾತರು ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಆಯೋಜಿಸಿರುವ ನಾಲ್ಕು ದಿನಗಳ 'ರಾಷ್ಟ್ರೀಯ ತೋಟಗಾರಿಕೆ ಮೇಳ'ದ ಮೊದಲ ದಿನವಾದ ಬುಧವಾರ ಅಧಿಕ ಸಂಖ್ಯೆಯಲ್ಲಿ ರೈತರೇ ಆಗಮಿಸಿದ್ದರು. 250ಕ್ಕೂ ಹೆಚ್ಚು ಮಳಿಗೆಗಳಲ್ಲಿ ವೈವಿಧ್ಯಮಯ ಉತ್ಪನ್ನಗಳು ಪ್ರದರ್ಶನಗೊಂಡಿವೆ. ಕರ್ನಾಟಕ, ಆಂಧ್ರ, ತಮಿಳುನಾಡು, ಛತ್ತೀಸ್‌ಗಡ ಸೇರಿ ಹತ್ತು ರಾಜ್ಯಗಳ ತೋಟಗಾರಿಕೆ ಸಂಶೋಧನಾ ಸಂಸ್ಥೆಗಳು ತಮ್ಮ ಹೊಸ ಮಾದರಿಯ ಬೆಳೆಗಳನ್ನು ರೈತರಿಗೆ ಪರಿಚಯಿಸುತ್ತಿದ್ದಾರೆ.



ವಿಜಯವಾಣಿ ಚಿತ್ರಗಳು

ಹೆಸರಘಟ್ಟದಲ್ಲಿ ಆಯೋಜಿಸಿದ್ದ ತೋಟಗಾರಿಕಾ ಮೇಳದಲ್ಲಿ ವಿದ್ಯಾ ಅವರಿಗೆ ಉತ್ತಮ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ಎ.ಕೆ.ಸಿಂಗ್, ಆರ್.ರವೀಂದ್ರ, ಸಂಜಯ್‌ಕುಮಾರ್ ಸಿಂಗ್ ಮತ್ತಿತರರಿದ್ದರು.



ತೋಟಗಾರಿಕೆ ಮೇಳದಲ್ಲಿ ನಿರ್ಮಿಸಿರುವ ಮಿಲ್ಲೆಟ್ ಪಾರ್ಕ್ ಅನ್ನು ಗಣ್ಯ ಅತಿಥಿಗಳು ವೀಕ್ಷಿಸಿದರು.

ತೋಟಗಾರಿಕೆ ಬೆಳೆ ಉತ್ಪಾದಕತೆ ಹೆಚ್ಚಳ

ದೇಶದಲ್ಲಿ ಆಹಾರ ಭದ್ರತೆ ಸಾಧನೆ ಬೆನ್ನಲ್ಲೇ ಪೌಷ್ಟಿಕಾಂಶ ಭದ್ರತೆಯತ್ತ ದೃಷ್ಟಿ ಹರಿಸಿರುವ ಸರ್ಕಾರ ರೈತರ ಆದಾಯ ದ್ವಿಗುಣ ಹಾಗೂ ತೋಟಗಾರಿಕೆ ಬೆಳೆಗಳ ರಫ್ತಿಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದು ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ನರೇಂದ್ರಸಿಂಗ್ ತೋಮರ್ ಹೇಳಿದ್ದಾರೆ.

» 15 ವರ್ಷದಲ್ಲಿ ಶೇ.38.5 ಏರಿಕೆ

» ಕೇಂದ್ರ ಕೃಷಿ ಸಚಿವ ತೋಮರ್ ಹೇಳಿಕೆ

ಹೆಸರಘಟ್ಟದಲ್ಲಿ 'ರಾಷ್ಟ್ರೀಯ ತೋಟಗಾರಿಕೆ ಮೇಳ'ವನ್ನು ದೆಹಲಿಯಿಂದ ವರ್ಚುವಲ್ ಮೂಲಕ ಉದ್ಘಾಟಿಸಿ ಮಾತನಾಡಿದರು. ಕಳೆದ 15 ವರ್ಷಗಳಲ್ಲಿ ತೋಟಗಾರಿಕೆ ಬೆಳೆಗಳ ಉತ್ಪಾದನೆ ಶೇ.38.5 ಹೆಚ್ಚಳಗೊಂಡಿದೆ. ಇದರಿಂದ ರಫ್ತಿನತ್ತ ಮುಖ ಮಾಡಲು ಬೆಳೆಗಾರರಿಗೆ ಅವಕಾಶ ಮಾಡಿಕೊಟ್ಟಿದೆ. ಇತ್ತೀಚಿಗೆ ಮಂಡನೆಯಾದ ಬಜೆಟ್‌ನಲ್ಲಿ ತಮ್ಮ ಸಚಿವಾಲಯಕ್ಕೆ 1.25 ಲಕ್ಷ ಕೋಟಿ ರೂ. ಅನುದಾನ ನಿಗದಿಯಾಗಿದೆ. ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ 'ಆತ್ಮನಿರ್ಭರ್ ಕ್ಲೀನ್ ಪ್ಲಾಂಟ್ ಕಾರ್ಯಕ್ರಮ'ಕ್ಕೆ 2,200 ಕೋಟಿ ರೂ. ವಿನಿಯೋಗಿಸಲಾಗಿದೆ. ಉತ್ತಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಐಐಎಚ್‌ಆರ್‌ನಿಂದ ಇನ್ನಷ್ಟು ರೈತಸ್ನೇಹಿ ಸಂಶೋಧನೆಗಳು ಹೊರಬರಲಿ ಎಂದು ಹಾರೈಸಿದರು.

ರೈತ ಪ್ರಶಸ್ತಿ ಪ್ರದಾನ

ತೋಟಗಾರಿಕೆ ಬೆಳೆಗಾರರಾದ ಸುಶಾಂತ್ ಕುಮಾರ್ ಪಾತ್ರ, ಪಿಂಕುದೇಬನಾಥ್, ಜಿ.ಸ್ವಾಮಿ, ಸಂಗ್ರಾಮಕೇಸರಿ ಪ್ರಧಾನ್, ವಿದ್ಯಾ, ಸಿದ್ಧಾರ್ಥನ್ ಹಾಗೂ ಪೋಲೇಪಲ್ಲಿ ಸುಧಾಕರ್ ಅವರಿಗೆ ಉತ್ತಮ ರೈತ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಇದೇ ವೇಳೆ 'ತರಕಾರಿ ಬೆಳೆಗಳ ಉತ್ಪಾದನಾ ತಂತ್ರಜ್ಞಾನಗಳು' ಕೈಪಿಡಿ ಬಿಡುಗಡೆ ಮಾಡಲಾಯಿತು. ಐಸಿಎಆರ್ ಉಪ ಮಹಾನಿರ್ದೇಶಕ (ತೋಟಗಾರಿಕೆ ವಿಭಾಗ) ಡಾ.ಎ.ಕೆ.ಸಿಂಗ್, 'ಅಪೇಡ' ಪ್ರಧಾನ ವ್ಯವಸ್ಥಾಪಕ ಆರ್.ರವೀಂದ್ರ, ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಪ್ರಧಾನ ವಿಜ್ಞಾನಿ ಡಾ.ಸಿ.ಅಶ್ವತ್ಥ್ ಮತ್ತಿತರರಿದ್ದರು.



ಗುಲಾಬಿ ಅಣಬೆ ಪ್ರದರ್ಶಿಸಿದ ಸಂಶೋಧನಾ ಕೇಂದ್ರದ ಪ್ರತಿನಿಧಿ.

ಮಲಯನ್ ಸೇಬು, ಗುಲಾಬಿ ಅಣಬೆ

ಬೆಂಗಳೂರಿನ ಹುಳಿಮಾವು ತೋಟಗಾರಿಕೆ ಸಂಶೋಧನಾ ಕೇಂದ್ರ ಅಭಿವೃದ್ಧಿಪಡಿಸಿರುವ ಹಣ್ಣು-ತರಕಾರಿಗಳು ಹೆಚ್ಚು ದಿನ ಬಾಡದೆ ತಾಜಾ ರೀತಿಯಲ್ಲೇ ಇರುತ್ತವೆ. ಇವುಗಳನ್ನು ಅಡುಗೆಗೆ ಬಳಸಿದರೆ ಸಾಂಬಾರು ರುಚಿಯಿಂದ ಕೂಡಿರುತ್ತದೆ. ಟೊಮ್ಯಾಟೋ, ಬದನೆಕಾಯಿ, ಬೀನ್ಸ್, ಮೆಣಸಿನಕಾಯಿ ಇತ್ಯಾದಿ ಬೆಳೆಗಳ ಬೀಜಗಳು ಮಾರಾಟಕ್ಕೂ ಲಭ್ಯವಿದೆ. ಸಣ್ಣ ಗಾತ್ರದ ಮಲಯನ್ ಸೇಬು, ಗುಲಾಬಿ ವರ್ಣದ ಅಣಬೆ ವಿಶೇಷ ಆಕರ್ಷಣೆಯಾಗಿದ್ದು, ಇವುಗಳನ್ನು ಖರೀದಿಸಲು ಜನರು ಮುಗಿಬಿದ್ದರು.



ಸಣ್ಣ ಗಾತ್ರದ ನಾಮಧಾರಿ ಕಲ್ಲಂಗಡಿ

ಮಾರುಕಟ್ಟೆಗಳಲ್ಲಿ ಕಾಣಸಿಗುವ ಸಾಮಾನ್ಯ ಕಲ್ಲಂಗಡಿ ಹಣ್ಣುಗಳು 3-4 ಕೆಜಿ ತೂಕದ್ದಾಗಿರುತ್ತದೆ. ಹಸಿರು, ಹಳದಿ ಮಿಶ್ರಿತ ವರ್ಣದ ಈ ಹಣ್ಣುಗಳನ್ನು ಬೆಳೆಯಲು 75 ದಿನಗಳ ಕಾಲಾವಕಾಶ ಬೇಕು. ಇಂತಹ ಹಣ್ಣುಗಳನ್ನು ಖರೀದಿಸಿ ಮನೆಗೆ ಒಯ್ಯಲು ಸಣ್ಣ ಕುಟುಂಬಗಳು ಹಿಂದೇಟು ಹಾಕುತ್ತವೆ. ಇದೀಗ 1.5ಯಿಂದ 2 ಕೆಜಿ ತೂಕದ ಓವಲ್ ಆಕೃತಿಯ 'ಕ್ರಿಮ್ಸನ್ ಕ್ರಷ್' ತಳಿಯ ಕಲ್ಲಂಗಡಿಯನ್ನು ನಾಮಧಾರಿ ಕಂಪನಿ ಅಭಿವೃದ್ಧಿಪಡಿಸಿದೆ. 65 ದಿನದಲ್ಲೇ ಕೊಯ್ಲಿಗೆ ಬರುವ ಈ ಹಣ್ಣುಗಳಲ್ಲಿ ರುಚಿ ಕೂಡ ಹೆಚ್ಚಿರುತ್ತದೆ. ಕುಟುಂಬವೊಂದು ಇಡೀ ಹಣ್ಣನ್ನು ಖರೀದಿಸಲು ಸುಲಭವಾಗಲಿದೆ ಎನ್ನುತ್ತಾರೆ ಸಂಸ್ಥೆಯ ಪ್ರತಿನಿಧಿಗಳು.



ಮಳಿಗೆಯೊಂದರಲ್ಲಿ ಹಣ್ಣು ಹಾಗೂ ತರಕಾರಿ ವೀಕ್ಷಿಸಿದ ಸಾರ್ವಜನಿಕರು.

ಸಾಂಬಾರು ಬೆಳೆಗಳತ್ತ ಗೃಹಿಣಿಯರ ಚಿತ್ತ

ಗ್ರಾಮೀಣರ ಅಡುಗೆಮನೆಯಲ್ಲಿ ಸಾಂಬಾರು ಪದಾರ್ಥಗಳು ಯಥೇಚ್ಛವಾಗಿರುತ್ತವೆ. ಶುಂಠಿ, ಮೆಣಸು, ದಾಲ್ಚಿನ್ನಿ, ಚಕ್ಕೆ, ಏಲಕ್ಕಿ, ಲವಂಗ ಇತ್ಯಾದಿ ಬೆಳೆಗಳನ್ನು ಹೆಚ್ಚಿನ ಗುಣಮಟ್ಟ ಹಾಗೂ ಬರಪೀಡಿತ ಪ್ರದೇಶಗಳಲ್ಲೂ ಬೆಳೆಯಬಹುದಾದ ತಳಿಗಳನ್ನು ಮಡಿಕೇರಿ (ಅಪ್ಪಂಗಳ) ಐಸಿಎಆರ್‌ನ ಸಾಂಬಾರು ಬೆಳೆಗಳ ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಕೇಂದ್ರವು ಅಭಿವೃದ್ಧಿಪಡಿಸಿವೆ. ಇವುಗಳ ಬಗ್ಗೆ ರೈತ ಮಹಿಳೆಯರು ಹಾಗೂ ಗೃಹಿಣಿಯರು ವಿಜ್ಞಾನಿಗಳಿಂದ ಮಾಹಿತಿ ಪಡೆದರು.

ತಾಕುಗಳಲ್ಲಿ ಬೆಳೆ ವೈವಿಧ್ಯ: ಐಐಎಚ್‌ಆರ್ ವಿಶಾಲ ಆವರಣದಲ್ಲಿ ನಡೆದಿರುವ ಮೇಳದಲ್ಲಿ ರೈತರಿಗೆ ಮಾಹಿತಿ ನೀಡಲೆಂದೇ ಹೊಸ ಬೆಳೆ ಪದ್ಧತಿ, ನವೀನ ತಂತ್ರಜ್ಞಾನದಡಿ ಬೆಳೆದಿರುವ ತಳಿಗಳ ಪ್ರಾತ್ಯಕ್ಷಿಕೆಯನ್ನು ತಾಕುಗಳಲ್ಲಿ ಪ್ರತಿಬಿಂಬಿಸಲಾಗಿದೆ. ಹುರುಳಿಕಾಯಿ, ಮೆಣಸಿನಕಾಯಿ, ಟೊಮ್ಯಾಟೋ, ಡ್ರ್ಯಾಗನ್ ಫ್ರೂಟ್, ದಾಳಿಂಬೆ, ಸಪೋಟ, ಮಾವು, ಹೂ ತರಕಾರಿಗಳಿಗೆ ಪ್ರತ್ಯೇಕ ತಾಕುಗಳನ್ನು ಮೀಸಲಿಡಲಾಗಿದೆ.

ರೈತರ ಕಲ್ಯಾಣಕ್ಕೆ ₹1.2 ಲಕ್ಷ ಕೋಟಿ: ತೋಮರ್

ಒಂದೂವರೆ ದಶಕದಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನೆ ಶೇ.38ರಷ್ಟು ಅಧಿಕ: ಕೇಂದ್ರ ಕೃಷಿ ಸಚಿವ | ತೋಟಗಾರಿಕಾ ಮೇಳಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರವು ತೋಟಗಾರಿಕಾ ಕ್ಷೇತ್ರಕ್ಕೆ ಆದ್ಯತೆ ನೀಡುತ್ತಿದ್ದು, ಪ್ರಸಕ್ತ ಬಜೆಟ್‌ನಲ್ಲಿ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯಕ್ಕೆ ₹1.25 ಲಕ್ಷ ಕೋಟಿ ಮೀಸಲಿಟ್ಟಿದೆ. ಒಂದೂವರೆ ದಶಕದಲ್ಲಿತೋಟಗಾರಿಕಾ ಬೆಳೆಗಳ ಉತ್ಪಾದನೆ ಶೇಕಡ 38.5ರಷ್ಟು ಅಧಿಕವಾಗಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ಥೋಮರ್ ತಿಳಿಸಿದರು.

ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು ಆಯೋಜಿಸಿರುವ ನಾಲ್ಕು ದಿನಗಳ 'ರಾಷ್ಟ್ರೀಯತೋಟಗಾರಿಕಾಮೇಳ-2023'ಕ್ಕೆ ಬುಧವಾರ ಆನ್‌ಲೈನ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

15 ವರ್ಷದಲ್ಲಿತೋಟಗಾರಿಕಾ ಬೆಳೆಗಳ ಉತ್ಪಾದಕತೆಯು ಸುಮಾರು ಶೇ.38.5ರಷ್ಟು ಹೆಚ್ಚಾಗಿದೆ. ತೋಟಗಾರಿಕಾ ಬೆಳೆಗಳ ಉತ್ಪಾದನೆಮತ್ತು ಲಭ್ಯತೆಯ ತ್ವರಿತ ಹೆಚ್ಚಳವು ದೇಶದ ಜನರ ಪೌಷ್ಟಿಕಾಂಶ ಹೆಚ್ಚಳಕ್ಕೆ ಸಹಾಯ ಮಾಡುತ್ತದೆ. ಕೃಷಿ ಮತ್ತು ತೋಟಗಾರಿಕೆಗೆ ಒತ್ತು ನೀಡಿರುವ ಕೇಂದ್ರ ಸರ್ಕಾರವು 2023-24ನೇ ಸಾಲಿನ ಬಜೆಟ್‌ನಲ್ಲಿ₹1.25 ಲಕ್ಷ ಕೋಟಿ ಅನುದಾನ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಪ್ರತಿಷ್ಠಿತಸಂಸ್ಥೆ:ಬೆಂಗಳೂರಿನಭಾರತೀಯತೋಟಗಾರಿಕಾ ಸಂಶೋಧನಾ ಸಂಸ್ಥೆಯು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿದ್ದು, ದೇಶದಲ್ಲಿ ನಿರಂತರವಾಗಿ ಬೆಳೆಯುತ್ತಿರುವ ತೋಟಗಾರಿಕಾ ಕ್ಷೇತ್ರಕ್ಕೆ ವಾರ್ಷಿಕವಾಗಿ ₹30,051 ಕೋಟಿ ರುಪಾಯಿಗೂ ಅಧಿಕ ಕೊಡುಗೆ ನಿಡುತ್ತಿದೆ. ದ್ರಾಕ್ಷಿ, ಟೊಮೆಟೋ, ಜೈವಿಕ ಕೀಟನಾಶಕಗಳು, ಮೌಲ್ಯವರ್ಧಿತಉತ್ಪನ್ನ ಮುಂತಾದ



ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿರುವ 'ರಾಷ್ಟ್ರೀಯ ತೋಟಗಾರಿಕಾ ಮೇಳ'ದಲ್ಲಿ ಪ್ರದರ್ಶನಕ್ಕಿಟ್ಟಿದ್ದ ತರಕಾರಿಗಳನ್ನು ಸಂಸ್ಥೆಯ ನಿರ್ದೇಶಕ ಡಾ। ಸಂಜಯ್‌ಕುಮಾರ್ ಸಿಂಗ್, ವಿಜ್ಞಾನಿ ಡಾ। ಅಶ್ವಥ್ ಮುಂತಾದವರು ವೀಕ್ಷಿಸಿದರು.

ಪ್ರಭಾವಶಾಲಿ ಕೊಡುಗೆಗಳನ್ನು ರೈತ ಸಮುದಾಯಕ್ಕೆ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಪೇಡಾ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಆರ್. ರವಿಂದ್ರ ಮಾತನಾಡಿ, ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಆಪೇಡಾ ಕಾರ್ಯೋನ್ಮುಖವಾಗಿದೆ. ತೋಟಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡುವ ಬಗ್ಗೆ ರೈತರಿಗೆ ತರಬೇತಿ ನೀಡಲಾಗುತ್ತದೆ. ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಹೊಸ ಹೊಸ ಪ್ರಯೋಗಗಳನ್ನು ರೈತರು ಸದುಪಯೋಗ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಅತ್ಯುತ್ತಮ ರೈತರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ಸ್ಮರಣಿಕೆ-ರಾಷ್ಟ್ರೀಯ ತೋಟಗಾರಿಕಾ ಮೇಳ-2023' ಮತ್ತು 'ತರಕಾರಿ ಬೆಳೆಗಳ ಉತ್ಪಾದನಾ ತಂತ್ರಜ್ಞಾನಗಳು-ಕೈಪಿಡಿ' ಬಿಡುಗಡೆಗೊಳಿಸಲಾಯಿತು. ಐಸಿಆರ್-ಐಐಎಚ್‌ಆರ್ ಬೆಂಗಳೂರು ನಿರ್ದೇಶಕ ಡಾ। ಸಂಜಯ್‌ಕುಮಾರ್ ಸಿಂಗ್, ದೆಹಲಿಯ ಐಸಿಎಆರ್ ಉಪ ಮಹಾನಿರ್ದೇಶಕ ಡಾ। ಎ.ಕೆ.ಸಿಂಗ್, ವಿಜ್ಞಾನಿ ಡಾ। ಅಶ್ವಥ್ ಹಾಜರಿದ್ದರು.

ಗುಲಾಬಿಯಲ್ಲಿ ಗುಲ್ಕನ್, ಸಿರಪ್, ಟೀ

ಮನುಷ್ಯನ ದೇಹಕ್ಕೆ ಗುಲಾಬಿ ಹೂನಿಂದ ಹಲವು ಪ್ರಯೋಜನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿರುವ 4 ದಿನಗಳ 'ರಾಷ್ಟ್ರೀಯ ತೋಟಗಾರಿಕಾ ಮೇಳ ಬುಧವಾರದಿಂದ ಆರಂಭವಾಗಿದ್ದು, ಗುಲಾಬಿ ಹೂವಿನಿಂದ ತಯಾರಿಸಿದ ಉತ್ಪನ್ನಗಳು ಜನರ ಗಮನ ಸೆಳೆಯುತ್ತಿವೆ.

ಸಮಶೀತೋಷ್ಣ ವಲಯದಲ್ಲಿ ಬೆಳೆಯುವ ಗುಲಾಬಿಯ 'ಅರ್ಕಾ ಪರಿಮಳ' ತಳಿಯಿಂದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಹಲವು ಉತ್ಪನ್ನಗಳನ್ನು ತಯಾರಿಸಿದ್ದು, ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶನಕ್ಕಿಟ್ಟಿದೆ. ರೈತರ ಗುಂಪುಗಳಿಗೆ ಉತ್ಪನ್ನಗಳ ತಯಾರಿಕೆಯ ತರಬೇತಿ ನೀಡಲು ಸಂಸ್ಥೆ ಇಚ್ಛಿಸಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಕಾರ್ಯೋನ್ಮುಖವಾಗಲಿದೆ.

'ಅರ್ಕಾ ಪರಿಮಳ' ಗುಲಾಬಿ ತಳಿಯು ಮನುಷ್ಯನ ದೇಹಕ್ಕೆ ಅವಶ್ಯಕವಾಗಿರುವ ಪೋಷಕಾಂಶಗಳನ್ನು ಒಳಗೊಂಡಿದ್ದು, ವಿಶೇಷ ಗುಣ ಹೊಂದಿದೆ. ಸುಲಭ ತಂತ್ರಜ್ಞಾನದ ಮೂಲಕ ಈ ಹೂವಿನಿಂದ ಉತ್ಪನ್ನಗಳನ್ನುತಯಾರಿಸಬಹುದಾಗಿದೆ.ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಬಳ್ಳಾರಿ, ವಿಜಯಪುರ ಮತ್ತಿತರ ಭಾಗಗಳಲ್ಲಿ ಅರ್ಕಾ ಪರಿಮಳ ಹೆಚ್ಚಾಗಿ



ತೋಟಗಾರಿಕಾ ಮೇಳದಲ್ಲಿ ರೋಸ್ ಉತ್ಪನ್ನಗಳು

ಬೆಳೆಯುತ್ತಿದ್ದು ಮೌಲ್ಯವರ್ಧನೆಗೂ ಇದು ಸಹಕಾರಿಯಾಗಲಿದೆ.

'ಅರ್ಕಾ ಪರಿಮಳದಿಂದ ರೋಸ್ ವಾಟರ್, ಗುಲ್ಕನ್, ಸಿರಪ್, ಟೀ ತಯಾರಿಸಲಾಗುತ್ತಿದೆ. ಗುಲ್ಕನ್ ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ. ರೋಸ್ ವಾಟರನ್ನು ಮುಖ ತೊಳೆಯಲು ಉಪಯೋಗಿಸುವುದರಿಂದ ತಂಪನೆಯ ಅನುಭವ ಉಂಟಾಗಲಿದೆ. ಅಲ್ಲದೆಸೌಂದರ್ಯವರ್ಧಕವಾಗಿ ಬಳಸಬಹುದು. ಟೀ ಸೇವನೆಯು ಕೊಲೆಸ್ಟ್ರಾಲ್ ಕಡಿಮೆ ಮಾಡುತ್ತದೆ. ಸದ್ಯ ಪ್ರದರ್ಶನಕ್ಕೆಮಾತ್ರ ಈ ಉತ್ಪನ್ನಗಳು ಮೇಳದಲ್ಲಿ ಲಭ್ಯವಿವೆ' ಎನ್ನುತ್ತಾರೆ ಸಂಸ್ಥೆ ಪುಷ್ಪ ವಿಜ್ಞಾನ ವಿಭಾಗದ ಮಹಾಂತೇಶ್.

23-02-2023
Kannadaprabha Pg 04

ಕೃಷಿ ಎಂಜಿನಿಯರಿಂಗ್ ನಿರ್ದೇಶನಾಲಯ ಸ್ಥಾಪನೆ

ಕೃಷಿ ಎಂಜಿನಿಯರಿಂಗ್ ನಿರ್ದೇಶನಾಲಯ ಸ್ಥಾಪನೆ ಮಾಡುವ ಕುರಿತು ಸಮಿತಿ ರಚಿಸಲಾಗಿದ್ದು, ವರದಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ಶೂನ್ಯವೇಳೆಯಲ್ಲಿ ಸದಸ್ಯ ಶಿವರಾಜ ಪಾಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೆಂಗಳೂರು ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾನಿಲಯದ ಉಪ ಕುಲಪತಿ ಮತ್ತು ಆಯುಕ್ತರ ನೇತೃತ್ವದಲ್ಲಿ ಈ ಸಮಿತಿ ರಚಿಸಲಾಗಿದೆ. ಬಿ.ಟೆಕ್ ವಿದ್ಯಾರ್ಥಿಗಳಿಗೆಕೃಷಿ ಇಲಾಖೆಯ ನೇಮಕಾತಿಯಲ್ಲಿ ಶೇ.2.3 ಮೀಸಲಾತಿ ನೀಡಲಾಗುತ್ತಿದೆ. 1500 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದರೆ, ಬಿ.ಟೆಕ್ ಸರಾಸರಿ ನೋಡಿದರೆ ಇನ್ನೂ ಹೆಚ್ಚು ಅವಕಾಶ ಸಿಕ್ಕಂತಾಗಿದೆ. ಎಲ್ಲಿಯೂ ಅನ್ಯಾಯವಾಗದಂತೆ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ಮಧ್ಯ ಪ್ರವೇಶಿಸಿದ ಜೆಡಿಎಸ್‌ನ ವೆಂಕಟರಾವ್ ನಾಡಗೌಡ, ರಾಜ ವೆಂಕಟಪ್ಪ ನಾಯಕ್ ಮತ್ತಿತರರು ರಾಯಚೂರು ಕೃಷಿ ವಿಶ್ವವಿದ್ಯಾನಿಲಯದ ಬಿಟೆಕ್ ಪದವೀಧರ ವಿದ್ಯಾರ್ಥಿಗಳ ಬೇಡಿಕೆಯನ್ನು ಸರ್ಕಾರ ತಕ್ಷಣ ಈಡೇರಿಸಬೇಕು. ಪ್ರತಿಭಟನೆ ಕೈಬಿಡುವಂತೆ ಮನವೊಲಿಸಬೇಕು ಎಂದು ಆಗ್ರಹಿಸಿದರು.

ಜೇನುಸಾಕಣೆಗೆ ಅನುಕೂಲ

ಬೀದರ್ ಜಿಲ್ಲೆಯಲ್ಲಿ ಜೇನು ಕೃಷಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಸರ್ಕಾರ ಅನುಕೂಲ ಕಲ್ಪಿಸಲು ಬದ್ಧ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು. ಜೆಡಿಎಸ್‌ನ ಬಂಡೆಪ್ಪ ಕಾಶೆಂಪುರ ಅವರ ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ್ ಜಿಲ್ಲೆಯಿಂದ ಜೇನು ಕೃಷಿಗೆ ಹೆಚ್ಚಿನ ಬೇಡಿಕೆ ಬಂದಿಲ್ಲ. ಬೇಡಿಕೆ ಬಂದರೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

23-02-2023
Vijayavani Pg 06

A variety of innovative technologies on display

The Hindu Bureau
BENGALURU

From mushroom millet cookies, incense sticks produced from flower waste, a brinjal-tomato graft plant to beat water-logging to using native bees to pollinate crops grown in a greenhouse, there were many innovative technologies being demonstrated at the National Horticulture Fair - 2023 on Wednesday.

Flower waste was earlier used to compost manure in the city, but scientists at the Indian Institute of Horticultural Research (IIHR) have now come up with eco-friendly incense sticks from it. Smita G.R. and her team have developed Arka Flower Incense Sticks from flower waste. "These incense sticks do not use charcoal and are completely plant-based and hence eco-friendly," she told *The Hindu*.

Tomato plants wilt if the fields are waterlogged and hence are not flood resistant. Principal scientist Lakshman R.H. of IIHR has come out with a novel solution by grafting brinjal's root to a tomato scion. "Brinjal plant doesn't wilt for six days even if waterlogged, whereas the tomato plant wilts in less than 48 hours. So, we have grafted brinjal root to the tomato plant," he said.



The incense sticks made of flower waste.

Till now, those growing cucurbit vegetables like muskmelon, cucumber and gourds in greenhouses used to manually pollinate female flowers for fruit bearing. Not any more as T. Venkata Rami Reddy, Principal Scientist, ICAR-IIHR, has now experimented and shown that two native bee species Indian honey bee and stingless bees can be used to pollinate cucurbit vegetables in greenhouses.

23-02-2023
Hindu Pg 05

Horticultural sector key to doubling farmers' income: Union Minister

'Productivity of horticultural crops has increased by 38.5% in the past 15 years and this rapid rise in production and availability of the crops shall translate into bridging the gap in nutritional security of the country'

The Hindu Bureau
BENGALURU

The horticultural sector plays a key role in doubling farmers' income along with meeting the much-needed nutritional security, said Union Minister for Agriculture Narendra Singh Tomar.

He was speaking after virtually inaugurating the National Horticulture Fair - 2023, organised with the theme 'Innovative Horticulture for Self-reliance' in the city from New Delhi on Wednesday.

"The productivity of horticultural crops has increased by about 38.5% in the past 15 years and this consistent and rapid increase in production and availability of horticultural crops shall translate into bridging the gap in the nutritional security of the country vis-à-vis global average. Towards this end, ₹2,200 crore has been allocated for 'Aatma Nirbhar Clean Plant Programme' to boost the availability of disease-free, quality planting material for high-value horticultural crops," the Minister said.



The National Horticulture Fair under way at the Indian Institute of Horticultural Sciences in Bengaluru on Wednesday.
SPECIAL ARRANGEMENT

A.K. Singh, Deputy Director General (Horticultural Sciences), said the production in the horticultural sector often exceeds what the country needs and creates a glut like situation in the market, leading to losses for farmers.

"We need to work on value addition to these crops to ensure the profits accrue to farmers," he said.

He also said many regional vegetables, fruits and especially medicinal plants which are not major crops are presently not finding the attention of the scientific community in research labs, so they never become part of our mainstream and these farmers do not benefit from any of the government schemes as well. "We need to work on these crops and bring them to the mainstream, especially those crops which have medicinal compounds. We are in talks with the AYUSH ministry over the same," he said.

Seven farmers were awarded the 'Best Farmer' award and ICAR-IIHR signed MoUs for mass production of Arka Vegetable Special with Arekal Organics Pvt. Ltd. and Arka Microbial consortium with Nutrienty Pvt. Ltd. at the fair. The fair, which includes 250 stalls showcasing several new technologies, is being held on the campus of ICAR - Indian Institute of Horticultural Research, Hesaraghatta, till Saturday. The stalls feature several new technologies developed by a host of agriculture and allied institutions of the State, private firms, stalls on seeds and planting material, food processing and packaging, farm equipment, irrigation systems and polyhouse accessories, crop insurance and others.

L.R. Puttegowda, a potato farmer from Hassan, who had come to the fair, said he visited the fair every year to update himself on the latest technologies. There were several agriculture students who had come visiting on the inaugural day.

23-02-2023
Hindu Pg 05

23-02-2023
Prjavani Pg 02

ಕಲ್ಲಂಗಡಿ ಬೀಜ ಬೇರ್ಪಡಿಸುವ ಯಂತ್ರ

• ಖಲೀಲಅಹ್ಮದ ಶೇಖ

ಬೆಂಗಳೂರು: ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಬೇರ್ಪಡಿಸುವುದು ರೈತರಿಗೆ ಹೊರೆಯ ಕೆಲಸ. ಇದನ್ನು ತಪ್ಪಿಸಲು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಈ ಹಣ್ಣಿನ ಬಿತ್ತನೆ ಬೀಜಗಳನ್ನು ಬೇರ್ಪಡಿಸುವ ಯಂತ್ರವನ್ನು ಅಭಿವೃದ್ಧಿಪಡಿಸಿದೆ.

ಹೆಸರಘಟ್ಟದಲ್ಲಿರುವ ಐಐಎಚ್‌ಆರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತೋಟಗಾರಿಕೆ ರಾಷ್ಟ್ರೀಯ ಮೇಳದಲ್ಲಿ ಕಲ್ಲಂಗಡಿ ಹಣ್ಣಿನಲ್ಲಿ ಬಿತ್ತನೆ ಬೀಜ ಬೇರ್ಪಡಿಸುವ ಯಂತ್ರ ರೈತರ ಗಮನ ಸೆಳೆಯುತ್ತಿದೆ.

'ಕಲ್ಲಂಗಡಿ ಹಣ್ಣನ್ನು ಕತ್ತರಿಸಿ, ತಿರುಳು ಮತ್ತು ಬೀಜವನ್ನು ಒಂದೆಡೆ ಸಂಗ್ರಹಿಸುತ್ತದೆ. ತಿರುಳನ್ನು ಜ್ಯೂಸ್ ಮಾಡಲು ಬಳಸಿದರೆ, ಬೀಜವನ್ನು ಪ್ರತ್ಯೇಕಗೊಳಿಸುವ ವ್ಯವಸ್ಥೆ ಇದೆ. ಇದು ಗಂಟೆಗೆ 30 ಕೆ.ಜಿ. ಬೀಜಗಳನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿದೆ' ಎಂದು ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿ ಜಿ.ಸೆಂಥಿಲ್ ಕುಮಾರನ್ ಮಾಹಿತಿ ನೀಡಿದರು.


ಕಲ್ಲಂಗಡಿ ಬೀಜಗಳನ್ನು ಬೇರ್ಪಡಿಸುವ ಯಂತ್ರ

'ಈ ಯಂತ್ರವನ್ನು ಐಐಎಚ್‌ಆರ್‌ನ ಎಂ.ಟೆಕ್ ವಿದ್ಯಾರ್ಥಿಗಳು ಅವಿಷ್ಕಾರಗೊಳಿಸಿದ್ದು, ಇದನ್ನು ಸಂಪೂರ್ಣವಾಗಿ ಸ್ಟೇನ್‌ಲೆಸ್ ಸ್ಟೀಲ್ ಬಳಸಿ ಮಾಡಲಾಗಿದೆ. ರೈತರು ಈ ಯಂತ್ರ ಬಳಕೆ ಮಾಡುವುದರಿಂದ ಕಲ್ಲಂಗಡಿ ಹಣ್ಣಿನ ಬಿತ್ತನೆ ಬೀಜಗಳನ್ನು ಸರಳವಾಗಿ ಮತ್ತು ವೇಗವಾಗಿ ಬೇರ್ಪಡಿಸುವ ಮೂಲಕ ಸಮಯದ ಉಳಿತಾಯ ಮಾಡಬಹುದು. ಇದರ ಬೆಲೆ ₹1.75 ಲಕ್ಷ ಇದೆ' ಎಂದು ತಿಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಂಚಾರಿ ತ್ರಿಚಕ್ರ ಸೌರ ಚಾಲಿತ ಸೈಕಲ್ ಫ್ರಿಡ್ಜ್ ಅಭಿವೃದ್ಧಿ

ಹಣ್ಣು ಮತ್ತು ತರಕಾರಿ ಮಾರಾಟಕ್ಕಾಗಿ 'ಅರ್ಕಾ' ಹೆಸರಿನ ಸೌರಚಾಲಿತ-ವಿದ್ಯುತ್ ಚಾಲಿತ ತ್ರಿಚಕ್ರ ವಾಹನ ಮತ್ತು ಸೈಕಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಈ ವಾಹನ ಸಣ್ಣ ವ್ಯಾಪಾರಸ್ಥರ ಮೇಲಿನ ಒತ್ತಡ ತಗ್ಗಿಸಿ, ವ್ಯಾಪಾರ ವೃದ್ಧಿಗೂ ನೆರವಾಗುತ್ತದೆ. ಹಣ್ಣು-ತರಕಾರಿಗಳನ್ನು 24 ಗಂಟೆಯವರೆಗೂ ತಾಜಾ ಸ್ಥಿತಿಯಲ್ಲೇ ಇಡುವ ಈ ಸೈಕಲ್. 200 ಕೆ.ಜಿ. ಭಾರವನ್ನು ಹೊತ್ತೊಯ್ಯಬಲ್ಲದು. ಇದೇ ರೀತಿಯ ವಿದ್ಯುತ್-ಸೌರ ಶಕ್ತಿ ಚಾಲಿತ ತ್ರಿಚಕ್ರವಾಹನ ಅಭಿವೃದ್ಧಿಪಡಿಸಿದ್ದು, ಒಮ್ಮೆ ಚಾರ್ಜ್ ಮಾಡಿದರೆ 5 ಗಂಟೆ ಕಾಲ ಬರುತ್ತದೆ. ಇದು 50 ಕಿ.ಮೀವರೆಗೂ ಸಂಚರಿಸುತ್ತದೆ.


ವಸ್ತುಪ್ರದರ್ಶನದಲ್ಲಿ ತರಕಾರಿಗಳನ್ನು ಸಾಗಿಸುವ ತ್ರಿಚಕ್ರ ಸೈಕಲ್

'ಕೃಷಿ ಉತ್ಪನ್ನಗಳನ್ನು ತಾಜಾ ಸ್ಥಿತಿಯಲ್ಲಿಡಲು ವಾಹನದ ಮೇಲ್ಭಾಗದಲ್ಲಿ ಸೌರಫಲಕ ಅಳವಡಿಸಲಾಗಿದೆ. ಇದರ ಸಹಾಯದಿಂದ ಉಷ್ಣಾಂಶ ನಿಯಂತ್ರಿಸುವ ವ್ಯವಸ್ಥೆ ಮಾಡಲಾಗಿದೆ. ಹವಾಮಾನಕ್ಕೆ ತಕ್ಕಂತೆ ಉತ್ಪನ್ನಗಳಿಗೆ ಅಗತ್ಯವಿರುವ ತಾಜಾ ವಾತಾವರಣ ಕಲ್ಪಿಸಬಹುದು. ಇದರಲ್ಲಿ ಸಾರ್ವಜನಿಕ ಪ್ರಕಟಣೆಗೆ ಧ್ವನಿವರ್ಧಕ, ವಿದ್ಯುತ್‌ಚಾಲಿತ ತೂಕದ ಯಂತ್ರ, ರಾತ್ರಿ ವ್ಯಾಪಾರ ಮಾಡಲು ಎಲ್‌ಇಡಿ ಬಲ್ಬ್ ಅನ್ನೂ ಅಳವಡಿಸಲಾಗಿದೆ' ಎಂದು ಐಐಎಚ್‌ಆರ್ ಜಿ.ಸೆಂಥಿಲ್ ಕುಮಾರನ್ ಮಾಹಿತಿ ನೀಡಿದರು.

ಅಧಿಕ ಬಿತ್ತನೆಯ ಮಧ್ಯೆಯೂ ಗೋಧಿ ಇಳುವರಿ ಕುಸಿತ?



ಪ್ರಜಾವಾಣಿ ವಾರ್ತೆ

ದೇಶದಲ್ಲಿ ಈ ಬಾರಿ ಹೆಚ್ಚಿನ ಪ್ರದೇಶದಲ್ಲಿ ಗೋಧಿ ಬಿತ್ತನೆ ಮಾಡಲಾಗಿದೆ. ಈ ಕಾರಣದಿಂದ ದೇಶದಲ್ಲಿ ಈ ಸಾಲಿನಲ್ಲಿ, ಈವರೆಗಿನ ಗರಿಷ್ಠ ಮಟ್ಟದ ಗೋಧಿ ಉತ್ಪಾದನೆಯಾಗಿರಬಹುದು ಎಂದು ಕೇಂದ್ರ ಸರ್ಕಾರವು ಅಂದಾಜಿಸಿತ್ತು. ಆದರೆ, ಗೋಧಿ ಬಿತ್ತನೆ ಪ್ರದೇಶದಲ್ಲಿ ಹಿಂಗಾರು ಮಳೆ ಕೊರತೆ ಮತ್ತು ಈಗ ಅತಿಯಾದ ಉಷ್ಣತೆಯ ಕಾರಣದಿಂದ ಇಳುವರಿ ಕಡಿಮೆಯಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಹೀಗಾಗಿ ಬರುವ ದಿನಗಳಲ್ಲಿ ಗೋಧಿಯ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಕ್ರಿಸಿಲ್ ಅಂದಾಜಿಸಿದೆ. ಉಷ್ಣತೆಯಲ್ಲಿ ಆಗಿರುವ ಏರಿಕೆಯು, ಗೋಧಿಯ ಇಳುವರಿಯ ಮೇಲೆ ಪರಿಣಾಮ ಬೀರಲಿದೆ ಎಂದು ಹವಾಮಾನ ಇಲಾಖೆಯೂ ಹೇಳಿದೆ.

2021-22ನೇ ಸಾಲಿನಲ್ಲಿ 3.41 ಕೋಟಿ ಹೆಕ್ಟೇರ್‌ನಲ್ಲಿ ಗೋಧಿಯ ಬಿತ್ತನೆಯಾಗಿತ್ತು. ಆ ಸಾಲಿನಲ್ಲಿ ಒಟ್ಟು 11.1 ಕೋಟಿ ಟನ್‌ಗಳಷ್ಟು ಗೋಧಿಯ ಉತ್ಪಾದನೆಯಾಗಲಿದೆ ಎಂದು ಸರ್ಕಾರವು ಅಂದಾಜಿಸಿತ್ತು. ಆದರೆ, 2022ರ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಉತ್ತರ ಭಾರತದಲ್ಲಿ ಬೀಸಿದ ಬಿಸಿಗಾಳಿಯ ಕಾರಣದಿಂದ ಗೋಧಿಯ ಉತ್ಪಾದನೆ 10.6 ಕೋಟಿ ಟನ್‌ಗಳಿಗೆ ಕುಸಿದಿತ್ತು. 2022-23ನೇ ಸಾಲಿನ ಹಿಂಗಾರಿನಲ್ಲಿ ದೇಶದಾದ್ಯಂತ 3.43 ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ಗೋಧಿಯನ್ನು ಬಿತ್ತನೆ ಮಾಡಲಾಗಿದೆ. 2021-22ನೇ ಸಾಲಿನಲ್ಲಿ ತಲೆದೋರಿದ ಪರಿಸ್ಥಿತಿಯೇ ಈ ಸಾಲಿನಲ್ಲಿಯೂ ತಲೆದೋರಬಹುದು ಎಂದು ರೈತ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ. ಈ ಬಗ್ಗೆ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಸಹ ಈಚೆಗೆ ಪ್ರಕಟಣೆ ಹೊರಡಿಸಿದ್ದು, ಗೋಧಿ ಬೆಳೆ ಸಂರಕ್ಷಣೆಗೆ ಸಲಹೆಗಳನ್ನು ನೀಡಿದೆ.

ಈ ಸಾಲಿನಲ್ಲಿ ಕೇಂದ್ರ ಸರ್ಕಾರವು ಅಂದಾಜಿಸಿದ್ದಕ್ಕಿಂತ, ಗೋಧಿ ಇಳುವರಿಯು ಈಗಾಗಲೇ ಕಡಿಮೆಯಾಗಿದೆ ಎಂದು ಕ್ರಿಸಿಲ್ ಅಂದಾಜಿಸಿದೆ. ಗೋಧಿ ಹೂ ಕಟ್ಟುವ ಸಂದರ್ಭದಲ್ಲಿ ಆಗಬೇಕಿದ್ದ ಮಳೆ ಆಗದೇ ಇರುವ ಕಾರಣ ಈಗಾಗಲೇ ಇಳುವರಿ ಕಡಿಮೆಯಾಗಿದೆ. ಇನ್ನು ಮಾರ್ಚ್ ಮಧ್ಯಭಾಗದಿಂದ ಉಷ್ಣಾಂಶದಲ್ಲಿ ಏರಿಕೆಯಾಗಬೇಕಿತ್ತು. ಆದರೆ, ಫೆಬ್ರುವರಿ ಮೂರನೇ ವಾರದಿಂದಲೇ ಉಷ್ಣಾಂಶ ಏರಿಕೆಯಾಗುತ್ತಿದೆ. ಇದು ಗೋಧಿ ಬೆಳೆಯ ಮೇಲೆ ತೀವ್ರ ಪರಿಣಾಮ ಬೀರಲಿದೆ. ಹೆಚ್ಚು ಉಷ್ಣತೆಯ ಕಾರಣದಿಂದ ಇಳುವರಿ ಮತ್ತಷ್ಟು ಕಡಿಮೆಯಾಗಲಿದೆ ಎಂದು ಕ್ರಿಸಿಲ್ ತನ್ನ ವರದಿಯಲ್ಲಿ ಹೇಳಿದೆ.

ಇದೇ ಫೆಬ್ರುವರಿಯ ಮೂರನೇ ವಾರದಲ್ಲಿ ಉತ್ತರ ಮತ್ತು ಪಶ್ಚಿಮ ಭಾರತದ ರಾಜ್ಯಗಳಲ್ಲಿ ವಾಡಿಕೆಗಿಂತ 5-10 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಹೆಚ್ಚು ಉಷ್ಣಾಂಶ ದಾಖಲಾಗಿದೆ. ಫೆಬ್ರುವರಿ 22ರ ನಂತರದ ಐದು ದಿನಗಳಲ್ಲಿ ವಾಡಿಕೆಗಿಂತ 3-5 ಡಿಗ್ರಿಗಳಷ್ಟು ಹೆಚ್ಚು ಉಷ್ಣಾಂಶ ಇರಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ. ಇದು ಗೋಧಿಯ ಇಳುವರಿಯ ಮೇಲೆ ಪರಿಣಾಮ ಬೀರಲಿದೆ ಎಂದು ಹವಾಮಾನ ಇಲಾಖೆಯೂ ಫೆಬ್ರುವರಿ 22ರ ತನ್ನ ಮುನ್ಸೂಚನೆಯಲ್ಲಿ ಹೇಳಿದೆ.

ಜನವರಿಯಲ್ಲಿ ಗೋಧಿಯ ಬೆಲೆಯಲ್ಲಿ ಏರಿಕೆಯಾದ ಕಾರಣ, ಬೆಲೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿತ್ತು. ಗೋಧಿ ಆಮದಿನ ಮೇಲೆ ನಿರ್ಬಂಧಗಳನ್ನು ಹೇರಿತ್ತು, ಜತೆಗೆ ತನ್ನ ಸಂಗ್ರಹದಲ್ಲಿರುವ ಗೋಧಿಯಲ್ಲಿ 30 ಲಕ್ಷ ಟನ್‌ಗಳಷ್ಟು ಗೋಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತ್ತು. ಈ ಮೂಲಕ ದೇಶಿ ಮಾರುಕಟ್ಟೆಯಲ್ಲಿ ಗೋಧಿ ಲಭ್ಯತೆಯ ಕೊರತೆ ಉಂಟಾಗದಂತೆ ಕ್ರಮ ತೆಗೆದುಕೊಂಡಿತ್ತು. ಈ ಕಾರಣದಿಂದ ಗೋಧಿ ಮತ್ತು ಗೋಧಿಹಿಟ್ಟಿನ ಬೆಲೆಯಲ್ಲಿ ಇಳಿಕೆಯಾಗಿತ್ತು. ಆದರೆ, ಈಗ ಇರುವ ಅಧಿಕ ಉಷ್ಣತೆಯ ಪರಿಸ್ಥಿತಿ ಇನ್ನೂ 20 ದಿನ ಮುಂದುವರಿದರೆ ಗೋಧಿಯ ಬೆಲೆಯಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಕ್ರಿಸಿಲ್ ಹೇಳಿದೆ.

ಯಾವುದೇ ಬೆಳೆಯ ಬಿತ್ತನೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು, ಆ ಋತುವಿನಲ್ಲಿ ಇಳುವರಿಯನ್ನು ಅಂದಾಜಿಸುತ್ತದೆ. ಮಳೆ ಮತ್ತು ವಾತಾವರಣವನ್ನು ಆಧರಿಸಿ, ಕೊಯ್ಲಿನ ಸಂದರ್ಭದಲ್ಲಿ ಇಳುವರಿಯ ಪರಿಷ್ಕೃತ ಅಂದಾಜನ್ನು ಪ್ರಕಟಿಸುತ್ತದೆ. ಗೋಧಿ ಇಳುವರಿಯ ಪರಿಷ್ಕೃತ ಅಂದಾಜನ್ನು ಕೇಂದ್ರ ಸರ್ಕಾರ ಇನ್ನಷ್ಟೇ ಪ್ರಕಟಿಸಬೇಕಿದೆ. ಹೀಗಾಗಿ ಗೋಧಿ ಇಳುವರಿಯಲ್ಲಿ ಎಷ್ಟು ಇಳಿಕೆಯಾಗಬಹುದು ಎಂಬ ಅಂದಾಜು ಈಗ ಲಭ್ಯವಿಲ್ಲ.

ಆತಂಕಕ್ಕೆ ಕಾರಣಗಳು

ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಹಿಂಗಾರು ಋತುವಿನಲ್ಲಿ ಹೆಚ್ಚು ಪ್ರದೇಶದಲ್ಲಿ ಗೋಧಿ ಬಿತ್ತನೆ ಮಾಡಲಾಗುತ್ತದೆ. ಮುಂಗಾರಿನಲ್ಲಿ ಗೋಧಿ ಮತ್ತು ಭತ್ತ ಬೆಳೆಯುವ ಪ್ರದೇಶದಲ್ಲಿ, ಅಕ್ಟೋಬರ್ ವೇಳೆಗೆ ಗೋಧಿಯನ್ನು ಮತ್ತೆ ಬಿತ್ತನೆ ಮಾಡಲಾಗುತ್ತದೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಡಿಸೆಂಬರ್ ಅಂತ್ಯ ಅಥವಾ ಜನವರಿಯ ಆರಂಭದಲ್ಲಿ ಗೋಧಿಯನ್ನು ಬಿತ್ತನೆ ಮಾಡಲಾಗುತ್ತದೆ. ಅಕ್ಟೋಬರ್‌ನಲ್ಲಿ ಬಿತ್ತನೆ ಮಾಡಿದ ಪ್ರದೇಶದಲ್ಲಿ ಗೋಧಿ ಬೆಳೆ ಈಗಾಗಲೇ ಕೊಯ್ಲಿಗೆ ಸಿದ್ಧವಾಗಿದೆ. ಒಂದು ವಾರದಲ್ಲಿ ಈ ಗೋಧಿಯ ಕೊಯ್ಲು ಮುಗಿಯಲಿದೆ. ಉಷ್ಣಾಂಶದಲ್ಲಿ ಆದ ಏರಿಕೆಯಿಂದ ಈ ಗೋಧಿ ಬೆಳೆಯ ಮೇಲೆ ಗಣನೀಯ ಪರಿಣಾಮ ಬೀರುವುದಿಲ್ಲ. ಆದರೆ, ಡಿಸೆಂಬರ್ ಮತ್ತು ಜನವರಿಯಲ್ಲಿ ಬಿತ್ತನೆ ಮಾಡಿದ ಗೋಧಿ ಬೆಳೆಯ ಮೇಲೆ ಅಧಿಕ ಉಷ್ಣಾಂಶವು ತೀವ್ರ ಪರಿಣಾಮ ಬೀರಲಿದೆ ಎಂದು ಕ್ರಿಸಿಲ್ ತನ್ನ ವರದಿಯಲ್ಲಿ ಹೇಳಿದೆ.

ಡಿಸೆಂಬರ್‌ನಲ್ಲಿ ಬಿತ್ತನೆ ಮಾಡಿದ ಗೋಧಿ ಬೆಳೆಯು ಈಗ ಹಾಲ್ತೆನೆ ಹಂತದಲ್ಲಿ ಇರುತ್ತದೆ. ಈ ಹಂತದಲ್ಲಿ ವಾಡಿಕೆ ಉಷ್ಣಾಂಶದಲ್ಲಿ ಏರಿಕೆಯಾದರೆ ಮತ್ತು ಹೊಲದಲ್ಲಿ ತೇವಾಂಶ ಕಡಿಮೆಯಾದರೆ ಹಾಲ್ತೆನೆಗಳು ಮುರುಟಿಹೋಗುತ್ತವೆ. ಗೋಧಿ ಜೊಳ್ಳಾಗುತ್ತದೆ. ಉತ್ತರ ಪ್ರದೇಶದ ಪೂರ್ವಭಾಗದಲ್ಲಿ ಗೋಧಿ ಬೆಳೆ ಈ ಹಂತದಲ್ಲಿದೆ. ಈಗ ಉಷ್ಣಾಂಶದಲ್ಲಿ ಆಗಿರುವ ಏರಿಕೆಯು ಈ ರಾಜ್ಯದಲ್ಲಿನ ಗೋಧಿ ಬೆಳೆಯ ಇಳುವರಿಯನ್ನು ಬಾಧಿಸಲಿದೆ ಎಂದು ಕ್ರಿಸಿಲ್ ಹೇಳಿದೆ.



ದೇಶದ ಒಟ್ಟು ಗೋಧಿ ಬಿತ್ತನೆ ಪ್ರದೇಶದಲ್ಲಿ ಈ 8ರಾಜ್ಯಗಳ ಪಾಲು ಶೇ 92ರಷ್ಟಾಗುತ್ತದೆ. ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲೂ ಗೋಧಿ ಬೆಳೆಯಲಾಗುತ್ತದೆ

ಪಂಜಾಬ್ ಮತ್ತು ಹರಿಯಾಣದಲ್ಲಿ ಜನವರಿಯಲ್ಲಿ ಗೋಧಿ ಬಿತ್ತನೆ ಮಾಡಲಾಗಿದೆ. ಈ ಪ್ರದೇಶದಲ್ಲಿನ ಗೋಧಿ ಬೆಳೆಯು ಈಗ ಇನ್ನೂ ಹೂಕಟ್ಟುವ ಹಂತದಲ್ಲಿದೆ.

ಈ ಸಂದರ್ಭದಲ್ಲಿ ಉಷ್ಣಾಂಶದಲ್ಲಿ ಏರಿಕೆಯಾದರೆ ಹೂಗಳು ಉದುರಿಹೋಗುತ್ತವೆ. ದೇಶದ ಒಟ್ಟು ಗೋಧಿ ಉತ್ಪಾದನೆಯಲ್ಲಿ ಉತ್ತರ ಪ್ರದೇಶದ ಉತ್ಪಾದನೆಯ ಪ್ರಮಾಣ ಶೇ 30ರಷ್ಟು. ಇನ್ನು ಪಂಜಾಬ್ ಮತ್ತು ಹರಿಯಾಣದ ಉತ್ಪಾದನೆ ಪ್ರಮಾಣ, ಒಟ್ಟು ಉತ್ಪಾದನೆಯ ಶೇ 25ರಷ್ಟಾಗುತ್ತದೆ. ಈ ಮೂರೂ ರಾಜ್ಯಗಳ ಉತ್ಪಾದನೆ ಪ್ರಮಾಣ ಶೇ 55ರಷ್ಟನ್ನು ದಾಟುತ್ತದೆ. ಈ ಮೂರು ರಾಜ್ಯಗಳಲ್ಲೂ ಉಷ್ಣಾಂಶ ಏರಿಕೆಯಾಗಿರುವ ಕಾರಣ ಇಲ್ಲಿ ಇಳುವರಿ ಕಡಿಮೆಯಾದರೆ, ಅದು ದೇಶದ ಒಟ್ಟು ಗೋಧಿಯ ಉತ್ಪಾದನೆ ಮತ್ತು ಬೆಲೆಯ ಮೇಲೆ ಪರಿಣಾಮ ಬೀರುತ್ತದೆ.

- ಉತ್ತರ ಪ್ರದೇಶದ ಹಲವೆಡೆ ಕಳೆದ ವಾರ ವಾಡಿಕೆಗಿಂತ 5-10 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ಉಷ್ಣಾಂಶ ದಾಖಲಾಗಿದೆ
- ಪಂಜಾಬ್ ಮತ್ತು ಹರಿಯಾಣದ ಹಲವೆಡೆ ಕಳೆದ ವಾರ ವಾಡಿಕೆಗಿಂತ 4-9 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ಉಷ್ಣಾಂಶ ದಾಖಲಾಗಿದೆ
- ಈ ರಾಜ್ಯಗಳಲ್ಲಿ ಗೋಧಿ ಹೊಲಗಳಲ್ಲಿ ತೇವಾಂಶ ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಹೊಲಕ್ಕೆ ನೀರು ಹರಿಸಿ ಮತ್ತು ಪೋಷಕಾಂಶಗಳನ್ನು ನೀಡಿ ಎಂದು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ರೈತರಿಗೆ ಸಲಹೆ ನೀಡಿದೆ

ಬಿತ್ತನೆ ಮತ್ತು ಉತ್ಪಾದನೆ

ದೇಶದಲ್ಲಿ ಗೋಧಿಯನ್ನು ಬೆಳೆಯುವ ಪ್ರದೇಶ ಹಾಗೂ ಉತ್ಪಾದನೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ ಎಂದು ಸರ್ಕಾರದ ಅಂಕಿ-ಅಂಶಗಳು ಹೇಳುತ್ತವೆ. ಏರುತ್ತಿರುವ ಗೋಧಿ ಬೇಡಿಕೆ ಪೂರೈಸಲು ಬಿತ್ತನೆ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಹೀಗಾಗಿ ಉತ್ಪಾದನೆ ಪ್ರಮಾಣವೂ ಏರಿಕೆ ಕಂಡಿದೆ



- ದೇಶದಲ್ಲಿ ಗೋಧಿ ಬಿತ್ತನೆ ಪ್ರದೇಶವು 6 ವರ್ಷಗಳಲ್ಲಿ ಶೇ 12.8ರಷ್ಟು ಹೆಚ್ಚಳವಾಗಿದೆ
- ಈ ಆರು ವರ್ಷಗಳ ಪೈಕಿ 2020-21ರಲ್ಲಿ ಅತಿಹೆಚ್ಚು ಪ್ರದೇಶ ಅಂದರೆ, 3 ಕೋಟಿ 46 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು
- 2020-21ರ ಅವಧಿಗೆ ಹೋಲಿಸಿದರೆ, ಈ ಬಾರಿ ಗೋಧಿ ಬಿತ್ತನೆ ಪ್ರದೇಶ ಇಳಿಕೆಯಾಗಿದೆ
- 2017-18ಕ್ಕೆ ಹೋಲಿಸಿದರೆ, 2022-23ರಲ್ಲಿ 38 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚುವರಿ ಪ್ರದೇಶವು ಗೋಧಿ ಬಿತ್ತನೆಗೆ ಒಳಪಟ್ಟಿದೆ



- 10 ವರ್ಷಗಳ ದತ್ತಾಂಶಗಳನ್ನು ಗಮನಿಸಿದರೆ, ಗೋಧಿ ಉತ್ಪಾದನೆ ಏರಿಕೆಯಾಗಿದೆ
- 2012-13ರಲ್ಲಿ 9.3 ಕೋಟಿ ಟನ್ ಇದ್ದ ಇಳುವರಿ, 2021-22ರಲ್ಲಿ 10.6 ಕೋಟಿ ಟನ್‌ಗೆ ಜಿಗಿದಿದೆ
- ಈ ಬಾರಿಯೂ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಆಗಿದ್ದು, 11.2 ಕೋಟಿ ಟನ್ ಇಳುವರಿಯನ್ನು ನಿರೀಕ್ಷಿಸಲಾಗಿದೆ
- 2014-15ರ ಒಂದು ವರ್ಷ ಮಾತ್ರ ಇಳುವರಿ ಕುಸಿದಿದ್ದನ್ನು ಹೊರತುಪಡಿಸಿದರೆ, ಉಳಿದ ಎಲ್ಲ ವರ್ಷಗಳಲ್ಲೂ ಹೆಚ್ಚಳವಾಗಿದೆ

ಆಧಾರ: ಕ್ರಿಸಿಲ್ ವರದಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಪ್ರಕಟಣೆ, ಹವಾಮಾನ ಇಲಾಖೆ ಮುನ್ಸೂಚನೆ, ಆರ್‌ಬಿಐನ ರಾಜ್ಯವಾರು ಆಹಾರಧಾನ್ಯ ಉತ್ಪಾದನೆ ವರದಿ, ಪಿಟಿಐ